

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಂದ ಸುಹೇಲ್‌ಗೆ ಅಭಿನಂದನೆ



ಸುಹೇಲ್‌ಗೆ ಮೆಚ್ಚುಗೆ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ

ಇದ್ದೆ. ಅವರು ಪೇಪರ್‌ನಲ್ಲಿ ಮೈಕ್ರೊಸ್ಕೋಪ್ ಮಾಡಿ ಪ್ರಸಿದ್ಧರಾಗಿದ್ದಾರೆ. ಅದರಿಂದ ಪೇಪರ್, ಡಯೋಗ್ನೋಸ್ಟಿಕ್ ಸಾಧನ ಆಗುತ್ತೆ ಎನ್ನುವ ಪ್ರಾಥಮಿಕ ತಿಳಿವಳಿಕೆ ಬಂತು. ಆ ಬಗ್ಗೆ ವಿಕಿಪಿಡಿಯಾ, ಗೂಗಲ್‌ನಲ್ಲಿ ಹುಡುಕಾಟ ಆರಂಭಿಸಿದೆ. ಪೇಪರ್ ಮೂಲ ಇಟ್ಟುಕೊಂಡು ಮುಂದಿನ ಸಂಶೋಧನೆ ಮಾಡಬೇಕು ಎಂದು ತೀರ್ಮಾನಿಸಿದೆ. ವಿಶ್ವ ಆರೋಗ್ಯ ಸಂಸ್ಥೆಯ ವೆಬ್‌ಸೈಟ್ ನೋಡಿದೆ. ಭಾರತ ಸರ್ಕಾರದ 'ಪೋಷಣ್' ಅಭಿಯಾನ, 'ಆಶಾ' ಕಾರ್ಯಕ್ರಮ ಏಕೆ ಯಶಸ್ವಿಯಾಗುತ್ತಿಲ್ಲ ಎನ್ನುವ ಪ್ರಶ್ನೆ ಇಟ್ಟುಕೊಂಡು ಬೇರೆ ಬೇರೆ ವಿಜ್ಞಾನಿಗಳ ಸಂಶೋಧನೆಗಳನ್ನು ಗೂಗಲ್ ಸ್ಕಾಲರ್ ಸರ್ಚ್ ಎಂಜಿನ್‌ನಲ್ಲಿ ಹುಡುಕಿ ಓದಿದೆ. ಅದಕ್ಕಾಗಿ ಪಕ್ಕಾ ಯೋಜನೆಯನ್ನು ರೂಪಿಸಿಕೊಂಡು ಅಧ್ಯಯನಕ್ಕೆ ಮುಂದಾದೆ.

ಪ್ರಸ್ತುತ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಗುರುತಿಸಲು ಡಯಾಗ್ನೋಸ್ಟಿಕ್ ಲ್ಯಾಬ್‌ಗಳಿಗೆ ಹೋಗಬೇಕು. ಅದಕ್ಕೆ ಅಂದಾಜು 800 ರೂಪಾಯಿ ವೆಚ್ಚವಾಗುತ್ತದೆ. ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಲ್ಯಾಬ್ ಕೂಡ ಇರುವುದಿಲ್ಲ. ಅದಕ್ಕೆ ತರಬೇತಿ ಪಡೆದ ಲ್ಯಾಬ್ ಟೆಕ್ನಿಷಿಯನ್ ಬೇಕು. ಮಕ್ಕಳ ದೇಹದಿಂದ ರಕ್ತ ತೆಗೆದು ತಂತ್ರಜ್ಞಾನದ ಸಹಕಾರದಿಂದ ವೈಜ್ಞಾನಿಕವಾಗಿ ವಿಶ್ಲೇಷಿಸಿ ವರದಿ ನೀಡುತ್ತಾರೆ. ಅದರಿಂದ ವೈದ್ಯಕೀಯ ತ್ಯಾಜ್ಯವೂ ಉತ್ಪತ್ತಿಯಾಗುತ್ತದೆ. ಇದಾವುದೂ ಇಲ್ಲದೆ ಶ್ರೀಸಾಮಾನ್ಯರೂ ಕೇವಲ 2 ರೂಪಾಯಿ ವೆಚ್ಚದಲ್ಲಿ ಅವರು ಇದ್ದ ಸ್ಥಳದಲ್ಲಿಯೇ ಅಪೌಷ್ಟಿಕತೆಯ ಪರೀಕ್ಷೆಯನ್ನು ಮಾಡಿಕೊಳ್ಳಬಹುದು. ಈ ತಂತ್ರಜ್ಞಾನವು ನಿಖರವಾದ ಫಲಿತಾಂಶ ನೀಡುತ್ತದೆ. ನಮ್ಮ ಹೊಸ ಆವಿಷ್ಕಾರದಲ್ಲಿ ದಾದಿಯರಾಗಲಿ, ತರಬೇತಿ ಪಡೆದ ತಂತ್ರಜ್ಞರಾಗಲಿ ಅವಶ್ಯವಿಲ್ಲ. ಬಿಳಿಹಾಳೆಯ ಮೇಲೆ ಮಗುವಿನ ಉಗುಳನ್ನು ಸಂಗ್ರಹಿಸಿ ಅದಕ್ಕೆ ನಾವು ತಯಾರಿಸಿದ ರಾಸಾಯನಿಕವನ್ನು ಸೇರಿಸಿ ಆ್ಯಂಡ್ರಾಯ್ಡ್ ಫೋನ್ ಆ್ಯಪ್ ಮೂಲಕ ಪರೀಕ್ಷಿಸಿದರೆ ನಿಖರವಾದ ಫಲಿತಾಂಶ ಸಿಗುತ್ತದೆ. ನಮ್ಮ ರಾಸಾಯನಿಕ ಉತ್ಪಾದನೆಗೆ 2 ರೂಪಾಯಿ ಮಾತ್ರ ಖರ್ಚಾಗುತ್ತದೆ. ಈ ತಂತ್ರವನ್ನು ಬಳಸಿ ಯಾವುದೇ ಸಂಘ ಸಂಸ್ಥೆಗಳು, ಸಾಮಾಜಿಕ ಕಾರ್ಯಕರ್ತರು ಮಕ್ಕಳಲ್ಲಿ ಅಪೌಷ್ಟಿಕ ನಿರ್ಮೂಲನೆ ಆಂದೋಲನವನ್ನೇ ಮಾಡಬಹುದು. ಮಗುವಿನಲ್ಲಿ ಅಪೌಷ್ಟಿಕತೆ ಕಾಡುವ ಆರು ತಿಂಗಳ ಮೊದಲೇ ಅದನ್ನು ಗುರುತಿಸಬಹುದು. ಈ ಆವಿಷ್ಕಾರಕ್ಕೆ ಅಮೆರಿಕದಲ್ಲಿ ನಾಲ್ಕು ಅಂತರರಾಷ್ಟ್ರೀಯ ಪ್ರಶಸ್ತಿಗಳು ಬಂದಿವೆ. ಪುಟ್ಟ ಗ್ರಹಕ್ಕೆ ಅಮೆರಿಕ ನನ್ನ ಹೆಸರನ್ನು ನಾಮಕರಣ ಮಾಡಿದೆ. ಅದು ಅವಿಸ್ಮರಣೀಯ.

◆ **ಗ್ರಾಮೀಣ ಮತ್ತು ಬಡ ಮಕ್ಕಳು ಸಂಶೋಧನಾ ಕ್ಷೇತ್ರದಲ್ಲಿ ತೊಡಗಲು ಕಷ್ಟ ಆಗುವುದಿಲ್ಲವೇ?**

ವಿದೇಶಗಳಿಗೆ ಹೋಗಿ ಹೊಸ ಆವಿಷ್ಕಾರದ ಪ್ರಬಂಧ ಮಂಡಿಸಲು ಸಮಸ್ಯೆ ಇಲ್ಲ. ಏಕೆಂದರೆ ನಮ್ಮ ಅಧ್ಯಯನ ಪ್ರಬಂಧ ಆಯ್ಕೆಯಾದರೆ, ಭಾರತ ಸರ್ಕಾರವೇ ಹೋಗಿ ಬರುವ ಖರ್ಚು–ವೆಚ್ಚವನ್ನು ಭರಿಸುತ್ತದೆ. ಸಮಸ್ಯೆ ಇರುವುದು ಆರಂಭಿಕ ಸಿದ್ಧತೆಯಲ್ಲಿ. ನಮ್ಮಲ್ಲಿ ಕ್ರೀಡೆಗೆ ಪ್ರೋತ್ಸಾಹ ನೀಡಿದಂತೆ ವೈಜ್ಞಾನಿಕ ಆವಿಷ್ಕಾರಗಳಿಗೆ ಶಾಲಾ ದಿನಗಳಲ್ಲಿ ಉತ್ತೇಜನ ಸಿಗುತ್ತಿಲ್ಲ. ಕ್ರೀಡಾ ಕ್ಷೇತ್ರದಲ್ಲಿ ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯನ್ನು ನೀಡಿದ ಅಭ್ಯರ್ಥಿಗಳಿಗೆ ವಿಶೇಷ ಆರ್ಥಿಕ ನೆರವು ಸಿಗುತ್ತದೆ. ಕೆಲವರಿಗೆ ಮಾಸಿಕ ಫೆಲೋಶಿಪ್ ಕೂಡ ದೊರೆಯುತ್ತದೆ. ವೈಜ್ಞಾನಿಕ ಸಂಶೋಧನೆಗೆ ಆ ರೀತಿಯ ಬೆಂಬಲ ಈವರೆಗೆ ಸಾಧ್ಯವಾಗಿಲ್ಲ. ನನ್ನ ಪೋಷಕರಿಬ್ಬರೂ ನೌಕರಿ ಮಾಡುವುದರಿಂದ ನನಗೆ ಹಣಕಾಸಿನ ಸಮಸ್ಯೆ ಅಷ್ಟಾಗಿ ಆಗಲಿಲ್ಲ. ಬಡ ಮಕ್ಕಳಿಗೆ ತಮ್ಮ ಅಧ್ಯಯನದ ಮೂಲ ಅಗತ್ಯಗಳನ್ನು ಪೂರೈಸಿಕೊಳ್ಳಲು ಕಷ್ಟ ಆಗಬಾರದು. ಆ ನಿಟ್ಟಿನಲ್ಲಿ ಪಂಚಾಯ್ತಿ ಮಟ್ಟದಿಂದಲೂ ನೆರವು ನೀಡುವ ಪ್ರವೃತ್ತಿ ರೂಢಿಯಾದರೆ ಭಾರತಕ್ಕೆ ಮತ್ತೊಬ್ಬ ಮಗದೊಬ್ಬ ವಿಜ್ಞಾನಿ ಸಿಗುತ್ತಲೇ ಇರುತ್ತಾರೆ ಎನ್ನುವ ಭರವಸೆ ನನಗಿದೆ.

◆ **ಮುಂದಿನ ತಲೆಮಾರನ್ನು ಸಂಶೋಧನೆಗೆ ಸಜ್ಜುಗೊಳಿಸುವ ಬಗ್ಗೆ ನಿಮ್ಮ ಆಲೋಚನೆ ಏನಿದೆ?**

8ನೇ ತರಗತಿಯಿಂದ 12ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಲ್ಲಿ ಸಂಶೋಧನಾ ಕೌಶಲ್ಯವನ್ನು ವೃದ್ಧಿಸುವ ಚಿಂತನೆಯೊಂದಿದೆ. ಅದಕ್ಕೆ ಡಾ. ರೋಹನ್ ಮತ್ತು ವಿಜ್ಞಾನಿಯೊಬ್ಬರು ಕೈ ಜೋಡಿಸುತ್ತಾರೆ. ಅವರ ಜೊತೆ ಸೇರಿ 'ಸ್ಪನ್ 32' ಎಂಬ ಸಂಸ್ಥೆಯನ್ನು ಆರಂಭಿಸುತ್ತೇವೆ. ಅದು ಇನ್ನೂ ಕಾರ್ಯಾರಂಭ ಮಾಡಿಲ್ಲ. ಸಂಶೋಧನೆ ನಾನೊಬ್ಬನೇ ಮಾಡುತ್ತೇನೆ ಎಂದರೆ ಅದು ತಪ್ಪಾಗುತ್ತದೆ. ಕೌಶಲ್ಯ ಮತ್ತು ತಂತ್ರ, ಪರಿಶ್ರಮದಿಂದ ಯಾರಾದರೂ ಸಂಶೋಧಕರು ಆಗಬಹುದು. ಎಲ್ಲಾ ಕ್ಷೇತ್ರದಲ್ಲೂ ಸಂಶೋಧನೆ ಮಾಡಬಹುದು. ನಿಮ್ಮ ಪತ್ರಿಕೋದ್ಯಮ ಸೇರಿದಂತೆ ಎಲ್ಲ ಶಿಸ್ತಿನ ಅಧ್ಯಯನಗಳಲ್ಲೂ ಅದು ಸಾಧ್ಯ. ಆದರೆ, ಆ ನಿಟ್ಟಿನಲ್ಲಿ ಯೋಚಿಸುವ ಮನಸ್ಥಿತಿಯನ್ನು ಸರಿಯಾದ ಸಮಯಕ್ಕೆ ಮಾಡುತ್ತಿಲ್ಲ. ಇಂದಿನ ನಮ್ಮ ವಿಜ್ಞಾನ ಪಠ್ಯವನ್ನೇ ತೆಗೆದುಕೊಂಡರೆ ಹಿಂದಿನ ವಿಜ್ಞಾನಿಗಳ ಆವಿಷ್ಕಾರದ ಇತಿಹಾಸವನ್ನು ವಿವರಿಸಲಾಗುತ್ತದೆ. ಅವರ ಚಿಂತನೆಯಂತೆ ಯೋಚಿಸುವ ಮನೋಭೂಮಿಕೆಯನ್ನು ಮಕ್ಕಳಲ್ಲಿ ಸಿದ್ಧಮಾಡುವಲ್ಲಿ ಯಶಸ್ವಿಯಾಗಿಲ್ಲ. ಆ ರೀತಿಯ ಚಿಂತನೆಯನ್ನು ಹೇಗೆ ತುಂಬಬೇಕು ಎಂದು ನಮ್ಮ ಸಂಸ್ಥೆ ಮಾಡುತ್ತದೆ. ಸಂಶೋಧಕರಾಗುವ ಐಡಿಯಾ ಹೇಗಿರಬೇಕು, ಅದನ್ನು ಹೇಗೆ ದುಡಿಸಬೇಕು ಎನ್ನುವ ಕೆಲವು ನಿಮಿಷಗಳ ವಿಡಿಯೊಗಳನ್ನು ಸಿದ್ಧಮಾಡಿ ಹಾಕುತ್ತೇವೆ. ತರ್ಕಬದ್ಧ ನಿರೂಪಣೆಯನ್ನು ವೀಕ್ಷಿಸಿದ ವಿದ್ಯಾರ್ಥಿಗಳಿಗೆ ಬೇಸಿಕ್ ಸೈನ್ಸ್ ರಿಸರ್ಚ್ ಬಗ್ಗೆ ಆಸಕ್ತಿ ಮೂಡುತ್ತದೆ ಎನ್ನುವುದು ನಮ್ಮ ಯೋಚನೆ.

◆ **ಚಿಕ್ಕ ವಯಸ್ಸಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಡಿಸೈನಿಂಗ್ ಕೌಶಲ್ಯ ತರಬೇತಿ ನೀಡುವ ಸಾಮರ್ಥ್ಯವನ್ನು ಹೇಗೆ ಸಾಧಿಸಿದಿರಿ?**